ಶ್ರೀ ಬಿ. ಬೈರಪ್ಪಾಜಿ.—ಹಾಗಾದರೆ ನನಗೆ ಒಂದು ಸಪ್ಲಿಮೆಂಟರಿಯನ್ನಾದರೂ ಹಾಕಲು ಅವಕಾಶ ಬೇಡವೇ?

ಅಧ್ಯಕ್ಷರು.—ಪ್ರತಿಯೊಬ್ಬರಿಗೂ ಅವಕಾಶ ಸಿಕ್ಕಬೇಕೆಂದರೆ ಅದು ಸಾಧ್ಯವಾಗುವುದಿಲ್ಲ. ಈಗಾಗಲೇ ಈ ಚರ್ಚೆಯಲ್ಲಿ 15 ನಿಮಿಷ ಕಳೆಯಿತು.

Construction of a Road from Herurgate to Kundur Gate.

*Q.—433. **Sri G. T. RANGAPPA.**—(Hosadurga).—

Will the Government be pleased to state :—

(*a*) whether an estimate for the construction of a road from Herurgate (H. H. Road) to Kundur gate *via* Hebballi route in Hosadurga Taluk has been prepared ;

(*b*) if so, the estimated cost of the same ;

(*c*) the action taken so far in this behalf ?

A.—**Sri G. B. SHANKAR RAO** (Parliamentary Secretary to Minister for Public Works).—

(*a*) No.

(*b*) and (*c*) Do not arise in view of reply to clause (*a*).

ಶ್ರೀ ಜಿ. ಟಿ. ರಂಗಪ್ಪ.—ಈಗ ಈ ಕೆಲಸದ ಬಗ್ಗೆ ಅಂದಾಜು ತಯಾರಾಗಿ 21 ಸಾವಿರಕ್ಕೆ ಸರ್ಕಾರದ ಮಂಜೂರಾತಿಗೆ ಬಂದಿದೆಯೆಂದು ತಿಳಿಯುತ್ತೇನೆ, ಇದು ನಿಜವೇ ?

ಶ್ರೀ ಜಿ. ಬಿ. ಶಂಕರರಾವ್.—ಆ ಬಗ್ಗೆ ಸಂಬಂಧಪಟ್ಟ ಕಾಗದಪತ್ರಗಳ್ಯಾವೂ ಈಗ ನನ್ನಲ್ಲಿಲ್ಲ

ಶ್ರೀ ಎಚ್. ಆರ್. ಕೇಶವಮೂರ್ತಿ.—ಅಂದಾಜುಗಳು ತಯಾರಾಗುವುದಕ್ಕೆ ಮುಂಚಿತವಾಗಿಯೇ ಕೆಲಸಗಳನ್ನು ಪ್ರಾರಂಭಮಾಡಿ, ಆ ನಂತರ ಅಂದಾಜುಗಳನ್ನು ತಯಾರಿಸಿರತಕ್ಕದ್ದರ ಬಗ್ಗೆ ಇದುವರೆಗೆ ಸರ್ಕಾರಕ್ಕೆ ಎಷ್ಟು ಹಣವನ್ನು ಹಾಳುಮಾಡಲಾಗಿದೆ ?

ಶ್ರೀ ಜಿ. ಬಿ. ಶಂಕರರಾವ್.—ಅಂದಾಜುಗಳು ತಯಾರಾಗುತ್ತವೆ. ಆದರೆ ಹಣದ ಅನುಕೂಲತೆ ನೋಡಿಕೊಂಡು ಕೆಲಸವನ್ನು ಪ್ರಾರಂಭಮಾಡುತ್ತೇವೆ. ಆದ್ದರಿಂದ ಅಂದಾಜು ತಯಾರಿಸುವ ಬಗ್ಗೆ ಖರ್ಚಾದ ಹಣವೇನೂ ವ್ಯರ್ಥ ಖರ್ಚಾಗುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಸದಸ್ಯರು ಹೊಸದುರ್ಗ ತಾಲ್ಲೂಕಿನಲ್ಲಿ ಅಂದಾಜು ತಯಾರಾಗುವುದಕ್ಕೆ ಮುನ್ನ ಕೆಲಸ ನಡೆದಿದೆ ಎಂಬುದಾಗಿ ಒಂದು ಪ್ರಶ್ನೆಯನ್ನು ತಂದಿದ್ದರೆ ಮಾನ್ಯ ಮಂತ್ರಿಗಳು ಅಂದಾಜು ಇನ್ನು ತಯಾರಾಗಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಿರುವುದರಿಂದ ಇಲ್ಲಿ ಹಾಕಿರತಕ್ಕ ಪ್ರಶ್ನೆ ಸರಿಯಾಗಿದೆಯೋ ಅಥವಾ ಕೊಡತಕ್ಕ ಉತ್ತರ ಸರಿಯಾಗಿಲ್ಲವೋ ಇದರಲ್ಲಿ ಯಾವುದು ಸರಿ ?

Sri G. B. SHANKAR RAO.—I have answered correctly.

Mr. SPEAKER.—Member's knowledge is different. The Minister's papers are different. Naturally there is bound to be difference. How can the Member know about the estimates? Are papers submitted to Members or to the Ministers ? That is not a proper supplementary.

ಶ್ರೀ ಬಿ. ಎಲ್. ಗೌಡ.—ಹೊಸದುರ್ಗ ತಾಲ್ಲೂಕಿನಲ್ಲಿ ಪಿ. ಡಬ್ಲ್ಯು. ಡಿ. ರಸ್ತೆ ಉದ್ದ ಎಷ್ಟಿದೆ ?

Sri G. B. SHANKAR RAO.—He must ask a separate question. If a separate question is put, I can answer.

Mr. SPEAKER.—The Hon'ble Parliamentary Secretary must say Notice.

Sri C. J. MUCKANNAPPA.—May I know Sir, whether the concerned file has been studied by the Hon'ble Parliamentary Secretary who gave the reply? Has he got any information?

Mr. SPEAKER.—It is disallowed.

ಶ್ರೀ ಬಿ. ಎಲ್. ಗೌಡ.—ಹೊಸದುರ್ಗ ತಾಲ್ಲೂಕಿನಲ್ಲಿ ಪಿ. ಡಬ್ಲ್ಯೂ. ಡಿ. ರಸ್ತೆ ಎಷ್ಟು ಮೈಲಿ ಆಗಿದೆ?

Mr. SPEAKER.—He has pleaded Notice. If the Hon'ble Member is not attentive, he has no right to take away the time of the others.

Co-operative Societies liquidated in Hosadurga Taluk.

*Q.—434.—Sri G. T. RANGAPPA (Hosadurga).—

Will the Government be pleased to state :—

(*a*) the number of Co-operative Societies liquidated in Hosadurga Taluk during the last three years ;

(*b*) out of them, the number of Societies that are still working even after liquidation ?

A.—Sri KONDAJJI BASAPPA (Deputy Minister for Co-operation). —

(*a*) Eight.

(*b*) Three.

ಶ್ರೀ ಜಿ. ಟಿ. ರಂಗಪ್ಪ.—(ಎ) ಪ್ರಶ್ನೆಗೆ ಉತ್ತರವಾಗಿ 8 ಸೊಸೈಟಿಗಳು ಎಂದು ಹೇಳಿದ್ದೀರಿ ಅವು ಯಾವ ಯಾವುವು?

ಶ್ರೀ ಕೊಂಡಜ್ಜಿ ಬಸಪ್ಪ.—ಶ್ರೀರಾಮಪುರ, ಬೆಳಗೂರು, ಚಿಕ್ಕಬ್ಯಾಲದ ಕೆರೆ, ಕುರುಬರ ಹಳ್ಳಿ.

ಶ್ರೀ ಜಿ. ಟಿ. ರಂಗಪ್ಪ.—ಲಿಕ್ವಿಡೇಷನ್ ಮಾಡುವ ಉದ್ದೇಶ ಏನು; ಅವುಗಳ ಪೈಕಿ ಮೂರಕ್ಕೆ ಕೆಲಸ ಮಾಡಲು ಏಕೆ ಅವಕಾಶ ಕೊಟ್ಟಿರಿ?

ಶ್ರೀ ಕೊಂಡಜ್ಜಿ ಬಸಪ್ಪ.—ಕೆಲಸ ಮಾಡುತ್ತವೆ ಎಂದರೆ Technically, these three Secretaries have not handed over records and accounts of these Societies to the liquidator who is appointed. So technically they are supposed to be working.

Sri C. J. MUCKANNAPPA.—May I know the reasons for liquidation of the Societies ?

Sri KONDAJJI BASAPPA.—Because they were defunct affairs were not good.

ಶ್ರೀ ಎಚ್.ಆರ್. ಕೇಶವಮೂರ್ತಿ.—ಈ ಮೂರು ಸೊಸೈಟಿಯಲ್ಲಿ ಎಷ್ಟು ಹಣತಿಂದು ಹಾಕಿದ್ದಾರೆ

ಶ್ರೀ ಕೊಂಡಜ್ಜಿ ಬಸಪ್ಪ.—ಆ ತಪಶೀಲು ಇಲ್ಲ. If you put a separate question, I will answer.

ಶ್ರೀ ಬಿ. ಬೈರಪ್ಪಾಜಿ.—ಲೆಕ್ಕಾಚಾರಗಳನ್ನು ಸರ್ಕಾರಕ್ಕೆ ಕೊಡದೇ ಇರತಕ್ಕ ಸೊಸೈಟಿಗಳು ಯಾವ ಯಾವುವು? ಮತ್ತು ಸೊಸೈಟಿಯಲ್ಲಿ ಚಪಾವಣಿಯಾಗಿರತಕ್ಕ ಹಣ ಎಷ್ಟು? ಅವರ ಮೇಲೆ ಏನು ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ?

ಶ್ರೀ ಕೊಂಡಜ್ಜಿ ಬಸಪ್ಪ.—ಮೂರು ಸೊಸೈಟಿಗಳು ಯಾವ ಯಾವುವು ಎಂದು ಕೇಳಿದರು ಅದಕ್ಕೆ ಉತ್ತರ ಹೇಳಿದ್ದೇನೆ. ಒಂದು ಶ್ರೀರಾಮಪುರ, ಇನ್ನೊಂದು ಬೆಳಗೂರು, ಮೂರನೆಯದು ಚಿಕ್ಕ ಬ್ಯಾಲದ ಕೆರೆ. ಇವುಗಳ ಪೈಕಿ ಚಿಕ್ಕಬ್ಯಾಲದ ಕೆರೆ ಸೊಸೈಟಿ ಸೆಕ್ರೆಟರಿಯವರು ಸತ್ತು